# ಬಾಲ ರಾಮಕೃಷ್ಣ

ಎಚ್.ವಿ. ಸರೋಜ

**ಶ್ರೀರಾಮಕೃಷ್ಣರ ಬಾಲ್ಯಜೀವನವನ್ನು ನಾಟಕರೂಪಕ್ಕೆ ಅಳವಡಿಸಿ ನಿರೂಪಿಸಿರುವ ಶ್ರೀಮತಿ ಸರೋಜ ಅವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.**

### ಪೀಠಿಕೆ

[ಆಂಗ್ಲೇಯರ ಪ್ರಭಾವ ಮೊದಲು ಆದುದು ವಂಗದೇಶದ ಮೇಲೆ. ಪಾಶ್ಚಾತ್ಯರ ಅಂಧಾನುಕರಣೆ ನವಸಂಪ್ರದಾಯ ವಾಯಿತು. ಜೊತೆಗೆ ಕ್ರೈಸ್ತ ಪಾದ್ರಿಗಳು ತಮ್ಮ ಮತಪ್ರಚಾರ ಮಾಡಲು ಹಿಂದೂಧರ್ಮವನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಿದ್ದರು. ಈ ರೀತಿ ಸನಾತನ ಸಂಸ್ಕೃತಿ ಪಾಶ್ಚಾತ್ಯಸಂಸ್ಕೃತಿಯ ನೂತನ ಜಂಝಾವಾತಕ್ಕೆ ಸಿಕ್ಕಿ ಸರ್ವನಾಶವಾಗುವಂತೆ ತೋರಿತು. ಇಂತಹ ವಿಷಮ ಸಮಯದಲ್ಲಿ ಇತಿಹಾಸವು ಸಮನ್ವಯಾಚಾರ್ಯನೊಬ್ಬನನ್ನು ನಿರೀಕ್ಷಿಸುತ್ತಿತ್ತು. ಈ ಇತಿಹಾಸದ ಪ್ರಾರ್ಥನೆ ವ್ಯರ್ಥವಾಗಲಿಲ್ಲ. ಆ ಸಮನ್ವಯಾಚಾರ್ಯರೇ ಮಹಾಚೇತನ ಶ್ರೀರಾಮಕೃಷ್ಣ ಪರಮಹಂಸರು. ಆ ಚೇತನದ ಶಕ್ತಿಯೇ ಶ್ರೀಮಾತೆ ಶಾರದಾದೇವಿ. ಆ ಚೇತನದ ಉತ್ಸವಮೂರ್ತಿಯೆ ಶ್ರೀಸ್ವಾಮಿ ವಿವೇಕಾನಂದರು. ಇಂತಹ ಮಹಾಚೇತನವನ್ನು ಈ ಧರೆಗೆ ಧಾರೆಯೆರೆದ ಮಹಾನ್ ದಂಪತಿಗಳೇ ಕ್ಷುಧೀರಾಮ ಚಟ್ಟೋಪಾಧ್ಯಾಯ ಮತ್ತು ಚಂದ್ರಮಣೀ ದೇವಿ. ಇವರಿಗೆ ಶ್ರೀರಾಮಕೃಷ್ಣರು ಜನಿಸುವುದಕ್ಕಿಂತ ಮುಂಚೆ ರಾಮಕುಮಾರ ಎಂಬ ಹಿರಿಯ ಮಗ ಮತ್ತು ರಾಮೇಶ್ವರ ಎಂಬ ಎರಡನೆಯ ಮಗ ಮತ್ತು ಕಾತ್ಯಾಯಿನಿ ಎಂಬ ಹೆಣ್ಣು ಮಗಳು ಇದ್ದರು. ರಾಮಕುಮಾರನು ಪ್ರಾಪ್ತ ವಯಸ್ಕನಾಗಿ ಸಂಸಾರವನ್ನು ಸಾಗಿಸಲು ಸಮರ್ಥನಾದ ಮೇಲೆ ತೀರ್ಥಯಾತ್ರಾಪ್ರೇಮಿಯಾಗಿದ್ದ ಕ್ಷುಧೀರಾಮರು ಮನೆ ಜವಾಬ್ದಾರಿಯನ್ನು ಮಗನ ಮೇಲೆ ಹೊರಿಸಿ ಗಯಾಕ್ಷೇತ್ರಕ್ಕೆ ಯಾತ್ರೆಗೆ ಬಂದಿದ್ದಾರೆ.]

### ದೃಶ್ಯ ೧

ಆಹಾ! ಎಷ್ಟು ದಿವ್ಯವಾಗಿದೆ ಈ ಅರಮನೆ. ಅಲ್ಲಿ ಸಿಂಹಾಸನದ ಮೇಲೆ ಕುಳಿತಿರುವವರ್‍ಯಾರು? ಓ! ಶ್ರೀ ಮಹಾವಿಷ್ಣುವಿದ್ದಂತಿದೆ. ಆ! ಹೌದು ಆತನೇ. ಆ ಮಂದಸ್ಮಿತ ಆ ತೇಜೋಮಯ ಮುಖಮಂಡಲ. ಆ ಶಂಖ ಚಕ್ರ. ಆತನ ಇಕ್ಕೆಲಗಳಲ್ಲಿ ಕುಳಿತಿರುವವರ್‍ಯಾರು? ಓ ನನ್ನ ಪಿತೃದೇವತೆಗಳು. ಎಷ್ಟು ಹಸನ್ಮುಖರಾಗಿದ್ದಾರೆ ಅಂದರೆ ನಾನು ಮಾಡಿದ ಶ್ರಾದ್ಧದಿಂದ ಅವರಿಗೆ ಈ ಸದ್ಗತಿ ಒದಗಿದೆ. ಈಗ ವಿಷ್ಣುಸನ್ನಿಧಿಯಲ್ಲಿದ್ದಾರೆ. ನಾನು ಇಷ್ಟು ಪ್ರಯಾಸಪಟ್ಟು ಬಂದು ಶ್ರಾದ್ಧ ಮಾಡಿದ್ದು ಸಾರ್ಥಕವಾಯಿತು.

ಇದೇನು ವಿಷ್ಣು ನನ್ನನ್ನೇ ಕರೆಯುತ್ತಿರುವಂತೆ ಕಾಣುತ್ತಿದೆಯಲ್ಲಾ. ಹೌದು. ಏಕಿರಬೇಕು? ಹೋಗಿ ನೋಡೋಣ [*ಹೋಗಿ ನಮಸ್ಕರಿಸುವನು*].

"ಕ್ಷುಧೀರಾಮ ನಾನು ನಿನ್ನ ಭಕ್ತಿಗೆ ಮೆಚ್ಚಿದ್ದೇನೆ. ನಾನು ನಿನ್ನ ಮನೆಯಲ್ಲಿ ನಿನ್ನ ಮಗನಾಗಿ ಜನಿಸಲು ಅಪೇಕ್ಷಿಸಿದ್ದೇನೆ."

"ಧನ್ಯ ಪ್ರಭು, ನನ್ನ ಜೀವನ ಧನ್ಯ! ಆದರೆ!"

"ಆದರೇನು? ಕ್ಷುಧೀರಾಮ?"

"ಪ್ರಭು, ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನಾದ ನೀನು ನನ್ನ ಮಗನಾಗಿ ಜನಿಸಿದರೆ ಕಡು ಬಡವನಾದ ನಾನು ನಿನಗೇನು ಉಣಬಡಿಸಲಿ? ಏನು ತೊಡಿಸಲಿ? ನಿನ್ನನ್ನು ಸರಿಯಾಗಿ ಉಪಚರಿಸದೆ ಹೋದರೆ ನನ್ನದು ಮಹಾಪರಾಧವಾಗುವುದಿಲ್ಲವೇ? ಆದ್ದರಿಂದ ಪ್ರಭು ನೀನು ನನ್ನ ಮೇಲೆ ಇಟ್ಟಿರುವ ಇಷ್ಟು ಕೃಪೆಯೇ ಸಾಕು."

"ಇಲ್ಲ ಕ್ಷುಧೀರಾಮ, ನೀನೇನೂ ಚಿಂತಿಸಬೇಡ. ನೀನು ಏನು ಉಣಲು ಕೊಟ್ಟರೆ ನಾನು ಅದರಿಂದಲೇ ತೃಪ್ತನಾಗುತ್ತೇನೆ. ನೀನು ಏನು ತೊಡಿಸಿದರೆ ಅದನ್ನೇ ಆನಂದದಿಂದ ತೊಡುತ್ತೇನೆ. ಆದರೆ ನಿನ್ನ ಮಗನಾಗಿ ಜನಿಸಬೇಕೆಂದೇ ನಾನು ಸಂಕಲ್ಪಿಸಿದ್ದೇನೆ."

"ಸರಿ, ನಿನ್ನಿಚ್ಛೆ ಆ ರೀತಿ ಇದ್ದಲ್ಲಿ ಅಂತೆಯೇ ಆಗಲಿ. ಎಲ್ಲವನ್ನು ನಿನಗೇ ಒಪ್ಪಿಸಿದ್ದೇನೆ." [*ಕೈ ಮುಗಿಯುವನು. ವೈಕುಂಠ ಮರೆಯಾಗುವುದು.*]

"ಹಾ! ಇದೇನು, ವಿಷ್ಣುವೆಲ್ಲಿ? ವೈಕುಂಠವೆಲ್ಲಿ? ನನ್ನ ಪಿತೃಗಳೆಲ್ಲಿ ಹೋದರು? ಓ! ಇದೆಲ್ಲಾ ಒಂದು ಕನಸೇ. ಅಬ್ಬಾ, ಎಷ್ಟು ಸುಂದರ ಕನಸು. ಆದರೆ ಇದು ಬರೀ ಕನಸೆಂದು ನನಗನ್ನಿಸುತ್ತಿಲ್ಲ. ಖಂಡಿತಾ ಶ್ರೀವಿಷ್ಣು ಹೇಳಿದ ಹಾಗೆ ಆತನು ನನ್ನ ಮಗನಾಗಿ ಜನಿಸುತ್ತಾನೆಂದು ನನಗನ್ನಿಸುತ್ತಿದೆ. ಇದನ್ನು ಚಂದ್ರಳಿಗೆ ತಿಳಿಸಬೇಕು. ಬೇಗ ಹೊರಡೋಣ."

### ದೃಶ್ಯ ೨

[*ಕ್ಷುಧೀರಾಮ ಚಟ್ಟೋಪಾಧ್ಯಾಯರು ತಮ್ಮ ಪಿತೃಗಳಿಗೆ ಗಯೆಯಲ್ಲಿ ಪಿಂಡಪ್ರದಾನ ಮಾಡಿ ಅವರಿಗೆ ಸದ್ಗತಿಯನ್ನು ಒದಗಿಸಿ ಸಂತೃಪ್ತಿಯಿಂದ ಅಂದು ರಾತ್ರಿ ನಿದ್ರಿಸುತ್ತಿದ್ದಾಗ ತಮಗಾದ ಕನಸನ್ನು ಅವರು ಕಾಮಾರಪುಕೂರಿಗೆ ಹಿಂದಿರುಗಿ ಬಂದ ಮೇಲೆ ತಮ್ಮ ಪತ್ನಿ ಚಂದ್ರಮಣಿದೇವಿಗೆ ತಿಳಿಸುತ್ತಿದ್ದಾರೆ.*]

**ಕ್ಷುಧೀರಾಮ** : ಚಂದ್ರ, ಗಯೆಯಲ್ಲಿ ನನಗೊಂದು ಅಪೂರ್ವವಾದ ಸ್ವಪ್ನವಾಯಿತು.

**ಚಂದ್ರಮಣಿ** : ಹೌದೇ, ನನಗೂ ಇಲ್ಲಿ ಒಂದು ಅನುಭವವಾಯ್ತು.

**ಕ್ಷುಧೀರಾಮ** : ಸರಿ, ಹೇಳು ಏನು ನಿನ್ನ ಅನುಭವ?

**ಚಂದ್ರಮಣಿ** : ನೋಡಿ, ನಾನು ನಮ್ಮ ಮನೆ ಹತ್ತಿರ ಇದೆಯಲ್ಲ,

ಶಿವದೇವಾಲಯ, ಅದಕ್ಕೆ ಧನಿ ಜೊತೆ ಹೋಗಿದ್ದೆ.

ಕ್ಷುಧೀರಾಮ : ಹೂಂ.

ಚಂದ್ರಮಣಿ : ಅಲ್ಲಿ ದೇವರ ಮುಂದೆ ಕೈಮುಗಿದು ನಿಂತಿರುವಾಗ ಇದ್ದಕ್ಕಿದ್ದಂತೆ ಜ್ಯೋತಿಯೊಂದು ಶಿವಲಿಂಗದಿಂದ ಹೊರಟು ನನ್ನ ಉದರದೊಳಗೆ ಹೊಕ್ಕಂತಾಯಿತು. ತಕ್ಷಣ ಜ್ಞಾನ ತಪ್ಪಿ ಕೆಳಗೆ ಬಿದ್ದುಬಿಟ್ಟೆ.

ಕ್ಷುಧೀರಾಮ : ಆಮೇಲೆ!

ಚಂದ್ರಮಣಿ : ಧನಿ ನನ್ನ ತಲೆಗೆ ನೀರು ತಟ್ಟಿ ಎಬ್ಬಿಸಿ ಮನೆಗೆ ಕರೆತಂದಳು.

ಕ್ಷುಧೀರಾಮ : ಇದರಿಂದ ನಿನಗೇನೆನ್ನಿಸುತ್ತದೆ, ಚಂದ್ರ?

ಚಂದ್ರಮಣಿ : ಈಶ್ವರನ ಅಂಶದ ಒಂದು ಶಿಶು ನಮಗೆ ಜನಿಸಬಹುದೇನೋ ಎನ್ನಿಸುತ್ತದೆ.

ಕ್ಷುಧೀರಾಮ : ಹಾ! ಹೌದು ಇಲ್ಲಿ ನನ್ನ ಅನುಭವ ಕೇಳು. ನಾನು ಅಂದು ಗಯೆಯಲ್ಲಿ ಪಿತೃಗಳಿಗೆ ಪಿಂಡಪ್ರದಾನ ಮಾಡಿ ಆ ಸಂತೃಪ್ತಿಯಲ್ಲಿ ಆರಾಮವಾಗಿ ಸುಖನಿದ್ರೆಯಲ್ಲಿದ್ದೆ. ಆಗ ನನಗೊಂದು ಸ್ವಪ್ನವಾಯಿತು. ಅದರಲ್ಲಿ ವೈಕುಂಠ ದರ್ಶನವಾಯಿತು. ಅಲ್ಲಿ ಶ್ರೀವಿಷ್ಣು ಸಿಂಹಾಸನದ ಮೇಲೆ ವಿರಾಜಮಾನನಾಗಿದ್ದಾನೆ. ಅವನ ಇಕ್ಕೆಲಗಳಲ್ಲಿ ನಮ್ಮ ಪಿತೃಗಳು ಸಂತೃಪ್ತಮನಸ್ಕರಾಗಿ ಕುಳಿತಿದ್ದಾರೆ. ಇದ್ದಕ್ಕಿದ್ದಂತೆ ಶ್ರೀವಿಷ್ಣು ಮಂದಸ್ಮಿತನಾಗಿ ನನ್ನ ಕಡೆ ಬೆರಳು ತೋರಿಸಿ ಹತ್ತಿರ ಬರುವಂತೆ ಕರೆದ. ನಾನು ವಿಷ್ಣುವಿನ ಹತ್ತಿರ ಹೋದೆ. ವಿಷ್ಣು ಹೇಳಿದ, "ಕ್ಷುಧೀರಾಮ, ನಾನು ನಿನ್ನ ಭಕ್ತಿಗೆ ಮೆಚ್ಚಿದ್ದೇನೆ. ನಾನು ನಿನ್ನ ಮಗನಾಗಿ ಜನಿಸುತ್ತೇನೆ."

ಚಂದ್ರಮಣಿ : ಆಹಾ! ಇದೇನು ವಿಚಿತ್ರ! ನಮಗಿಬ್ಬರಿಗೂ ಒಂದೇ ಸಮಯದಲ್ಲಿ ಈ ರೀತಿ ಅನುಭವಗಳಾಗಿವೆಯಲ್ಲ.

ಕ್ಷುಧೀರಾಮ: ಹೌದು, ಚಂದ್ರ, ದೇವರೇ ನಮಗೆ ಜನಿಸುತ್ತಾನೆಂಬುದು ಖಚಿತ.

ಚಂದ್ರಮಣಿ : ಆದರೆ, ನಿಮಗೆ ವಿಷ್ಣು ಜನಿಸುತ್ತೇನೆ ಎಂದು ಹೇಳಿದ. ನನಗೆ ಶಿವನ ಜ್ಯೋತಿ ಗರ್ಭದಲ್ಲಿ ಪ್ರವೇಶಿಸಿತು. ಆ ಶಿಶು ವಿಷ್ಣುವಿನ ಅಂಶವೋ ಶಿವನ ಅಂಶವೋ?

ಕ್ಷುಧೀರಾಮ: ದೇವರು ವಿಷ್ಣುವಾದರೇನು, ಶಿವನಾದರೇನು? ಎರಡೂ ಒಂದೇ ಎನ್ನುವುದು ನಿನಗೆ ತಿಳಿಯದೇ? ಎರಡರ ಅಂಶಗಳನ್ನೂ ಒಳಗೊಂಡ ಪುತ್ರರತ್ನವನ್ನು ನೀನು ಪಡೆಯುತ್ತಿ. ಇದರಲ್ಲಿ ಏನೂ ಸಂಶಯವಿಲ್ಲ.

ಚಂದ್ರಮಣಿ : ಹೌದೇ, ಈ ಸಮಾಚಾರವನ್ನು ಮೊದಲು ಧನಿಗೆ ತಿಳಿಸಬೇಕು.

ಕ್ಷುಧೀರಾಮ : ಈಗಲೇ ಯಾರಿಗೂ ತಿಳಿಸಬೇಡ.

ಚಂದ್ರಮಣಿ : ಸರಿ, ಅಂತೆಯೇ ಆಗಲಿ. ಮುಂದೆ ನೋಡೋಣ, ನಡೆಯಿರಿ. ನಿಮಗೆ ಪ್ರಯಾಣದ ಆಯಾಸವಾಗಿದೆ. ಊಟ ಮಾಡಿ ವಿಶ್ರಮಿಸಿ.

## ದೃಶ್ಯ ೩

*[ಇಬ್ಬರ ಹೆಂಗಸರ ಸಂಭಾಷಣೆ]*

೧. : ಅಲ್ಲಿ ಚಂದ್ರ ಮನೆಯಿಂದ ಶಂಖಧ್ವನಿ ಬಂದಿತಲ್ಲಾ. ಅವಳಿಗೆ ಶಿಶು ಜನನವಾಯಿತಂತೆ.

೨. : ಓ ನಿನಗಿನ್ನೂ ಸಮಾಚಾರ ತಿಳಿದಿಲ್ಲವೋ, ನಾನು ಅಲ್ಲಿಂದಲೇ ಬರುತ್ತಿರುವುದು. ಚಂದ್ರಳಿಗೆ ಗಂಡುಶಿಶುವಾಗಿದೆ. ಎಷ್ಟು ಮುದ್ದಾಗಿದೆ ಅನ್ನಿ. ಒಳ್ಳೆ ಆರು ತಿಂಗಳ ಮಗುವಿನಂತಿದೆ.

೧. : ಹೌದೇ?

೨. : ಅಷ್ಟೇ ಅಲ್ಲ, ಅದು ಎಂತಹ ವಿಚಿತ್ರ ಮಗು ಅನ್ನಿ. ಧನೀನೇ ಹೆರಿಗೆ ಮಾಡಿಸಿದ್ದು. ಹೆರಿಗೆ ಆದಮೇಲೆ ಮಗುವನ್ನು ಮಲಗಿಸಿ ಧನಿ ತಾಯಿಗೆ ಮಾಡಬೇಕಾದ ಉಪಚಾರ ಎಲ್ಲಾ ಮಾಡಿದ ಮೇಲೆ ಮಗುವನ್ನು ಮಲಗಿಸಿದ್ದ ಕಡೆ ನೋಡಿದರೆ ಮಗುವೇ ಇಲ್ಲವಂತೆ!

೧. : ಅಂದರೆ ಅಲ್ಲಿ ಬೇರೆ ಯಾರಾದರೂ ಬಂದಿದ್ದರೆ?

೨. : ಯಾರೂ ಇಲ್ಲ. ಧನಿ ಎಷ್ಟು ಹುಡುಕಿದರೂ ಆ ಸಣ್ಣ ಕೋಣೆಯಲ್ಲಿ ಮಗು ಎಲ್ಲೂ ಇಲ್ಲ.

೧. : ಆಮೇಲೆ?

೨. : ಮಗು ಇಲ್ಲವಲ್ಲ ಅಂತ ಕಳವಳ ಪಡುತ್ತ ಹುಡುಕುತ್ತಿರುವಾಗ ಬತ್ತ ಬೇಯಿಸುವ ಒಲೆಯ ಬೂದಿಯಲ್ಲಿ ಎರಡು ಪಿಳಿ ಪಿಳಿ ಹೊಳೆಯುವ ಕಣ್ಣುಗಳು ಕಾಣಿಸಿದವಂತೆ. ಧನಿ ಅಲ್ಲಿ ಹೋಗಿ ನೋಡಿದಾಗ ಮಗು ಬೂದಿಯಲ್ಲಿ ತನ್ನನ್ನು ತಾನು ಹುದುಗಿಸಿ ಕೊಂಡು ಎರಡು ಪಿಳಿ ಪಿಳಿ ಕಣ್ಣನ್ನು ಮಾತ್ರ ತೆಗೆದು ನೋಡು ತ್ತಿದೆಯಂತೆ.

೧. : ಅಯ್ಯೋ ಎಷ್ಟು ವಿಚಿತ್ರ! ಅಷ್ಟು ಪುಟ್ಟ ಮಗು, ಅದು ಹೇಗೆ ಅಲ್ಲಿಗೆ ಹೋಯ್ತು?

೨. : ಅದೇ ಆಶ್ಚರ್ಯ. ಬೂದಿ ಮುಕ್ಕಣ್ಣನಂತೆ ಇದ್ದ ಮಗುವನ್ನು ತೊಳೆದು ನೋಡಿದರೆ ಒಳ್ಳೆ ಚಿನ್ನದ ಬಣ್ಣ, ದುಂಡು ದುಂಡಗೆ ಸುಮಾರು ೬ ತಿಂಗಳ ಮಗುವಿನಷ್ಟಿದೆ.

೧. : ಹೌದೇ? ಈ ವಯಸ್ಸಿನಲ್ಲಿ ಚಂದ್ರಮಣಿಗೆ ಅಷ್ಟು ಚೆನ್ನಾಗಿರೋ ಮಗುವಾಯ್ತಲ್ಲಾ, ಹೋಗಲಿ ಬಿಡು. ಅವಳು ತುಂಬಾ ಒಳ್ಳೆ ಸ್ವಭಾವದವಳು. ಮೃದು ಹೃದಯೆ. ಮುಗ್ಧೆ. ಎಲ್ಲಕ್ಕಿಂತ ಮಿಗಿಲಾಗಿ ದೈವಭಕ್ತೆ.

೨. : ಅದಕ್ಕೇ ಅವರ ಮನೆಯಲ್ಲಿ ದೇವರಂತಹ ಮಗು ಹುಟ್ಟಿರುವುದು, ನಡಿ. ನಾವಿಬ್ಬರೂ ಹೋಗಿ ಮಗುವನ್ನು ನೋಡಿ ಬರೋಣ.

## ದೃಶ್ಯ ೪

*[ಮಗುವು ವಿಷ್ಣುವಿನ ಕೃಪೆಯಿಂದ ಜನಿಸಿದ್ದರಿಂದ ಅವನಿಗೆ ಗದಾಧರ ಎಂದು ಹೆಸರಿಟ್ಟರು. ಆದರೆ ಮುದ್ದಿಗೆ ಎಲ್ಲರೂ ಗದಾಯ್ ಎಂದು ಕರೆಯುತ್ತಿದ್ದರು. ಒಂದು ದಿನ ಗದಾಯ್ ತನ್ನ ಒಂದು ಬುಟ್ಟಿಯಲ್ಲಿ ಕಡಲೆ ಪುರಿಯನ್ನು ಹಾಕಿಕೊಂಡು ಒಂದೊಂದೇ ಕಾಳನ್ನು ಬಾಯೊಳಗೆ ಹಾಕಿಕೊಳ್ಳುತ್ತಾ ಹಾಡುತ್ತಾ ಗದ್ದೆಯ ಮಧ್ಯ ಹೋಗುತ್ತಿದ್ದಾನೆ]*

**ಗದಾಯ್**: ಆಹಾ! ಈ ಗದ್ದೆಯ ಹಸಿರು ಪೈರು ಹೇಗೆ ತೂಗುತ್ತಿದೆ. ಇದೇನು ಇದ್ದಕ್ಕಿದ್ದಂತೆ ಆಕಾಶದಲ್ಲಿ ಕಪ್ಪು ಮೋಡ ಕವಿಯಿತಲ್ಲ! ಮಳೆ ಬರುತ್ತದೆಯೋ ಏನೋ. ಹಾ! ಇದೇನು ಕರಿ ಮೋಡಗಳ ಹಿನ್ನೆಲೆಯಲ್ಲಿ ಬಲಾಕ ಪಕ್ಷಿಗಳ ಬಿಳಿಯ ಸಾಲು. ಓಹ್! [*ಆನಂದ ಸೂಚಿಸುವನು, ಎರಡು ಕೈ ಎತ್ತಿ ಹಾಗೆಯೇ ಬಿದ್ದು ಬಿಡುವನು.*]

**ಸ್ನೇಹಿತ ೧** : ನೋಡೋ ಅಲ್ಲಿ ಯಾರೋ ಬಿದ್ದಂತಿದೆ. ಯಾರದು?

**ಸ್ನೇಹಿತ ೨**: ಗದಾಯ್ ಕಣೋ. ಅದೇಕೆ ಹಾಗೆ ಬಿದ್ದು ಬಿಟ್ಟಿದ್ದಾನೆ?

**ಸ್ನೇಹಿತ ೩** : ಸ್ವಲ್ಪ ನೀರು ತೆಗೆದುಕೊಂಡು ಬಾರೋ. [*ನೀರು ಚಿಮುಕಿಸುವರು*]

**ಸ್ನೇಹಿತ ೪** : ಏ! ಇವನು ಏಳುತ್ತಾ ಇಲ್ಲ. ಎತ್ತಿಕೊಂಡು ಹೋಗಿ ಮನೆಗೆ ಬಿಡೋಣ. [*ಎತ್ತಿಕೊಳ್ಳುವರು.*]

[*ಹಿನ್ನೆಲೆಯಲ್ಲಿ : ಪ್ರಕೃತಿ ಸೌಂದರ್ಯವು ಗದಾಯ್‌ಗೆ ಭಗವಂತನ ದಿವ್ಯಸೌಂದರ್ಯದ ಸವಿಯನ್ನು ಉಂಟುಮಾಡಿತ್ತು. ಇದು ರಾಮಕೃಷ್ಣರು ಮೊದಲನೆ ಸಲ ಅನುಭವಿಸಿದ ಭಾವಸಮಾಧಿ. ಆದರೆ ಯಾರಿಗೂ ಇದು ಅರ್ಥವಾಗಲಿಲ್ಲ. ಇದು ಯಾವುದೋ ಖಾಯಿಲೆ ಇರಬೇಕೆಂದು ಹೆದರಿದ್ದ ತಂದೆ ತಾಯಿಗಳಿಗೆ ಗದಾಯ್ ಹೇಳಿದ, "ಇದು ಖಾಯಿಲೆಯಲ್ಲ. ನನಗೆ ಆ ಸುಂದರ ದೃಶ್ಯವನ್ನು ಕಾಣುತ್ತಿದ್ದಂತೆ ಅತೀ ಆನಂದ ಉಂಟಾಗಿ ಆ ಆನಂದದ ಅತಿರೇಕದಲ್ಲಿ ಮೈಮರೆತು ಬಿದ್ದುಬಿಟ್ಟೆ" ಎಂದು.*]

### ದೃಶ್ಯ ೫

[*ಶಾಲೆಯಲ್ಲಿ ಗದಾಯ್*]

**ಸ್ನೇಹಿತ ೧** : ಗದಾಯ್, ನಾನು ನಿಮ್ಮ ಮನೆಗೆ ಬಂದಿದ್ದೆ. ನೀನೆಲ್ಲಿ ಹೋಗಿದ್ದೆ?

**ಗದಾಯ್** : ನಾನು ಕುಂಬಾರಣ್ಣನ ಮನೆಗೆ ಹೋಗಿದ್ದೆ.

**ಸ್ನೇಹಿತ ೨** : ಕುಂಬಾರನ ಮನೆಗೆ ಏಕೆ?

**ಗದಾಯ್** : ಅವನಿಂದ ನಾನು ವಿಗ್ರಹಗಳನ್ನು ಮಾಡುವುದನ್ನು ಕಲಿತಿದ್ದೇನೆ.

**ಸ್ನೇಹಿತ ೩** : ನೀನು ವಿಗ್ರಹ ಮಾಡ್ತೀಯಾ?

**ಸ್ನೇಹಿತ ೪** : ಏಕೆ? ನೀನು ನೋಡಿಲ್ವ, ಅವನು ಮಾಡಿರುವ ವಿಗ್ರಹಗಳನ್ನು.

**ಸ್ನೇಹಿತ ೫** : ನೀನು ಇನ್ನೂ ಏನೇನು ಮಾಡ್ತೀಯೋ?

**ಸ್ನೇಹಿತ ೬** : ಅವನು ಹಾಡ್ತಾನೆ, ನಾಟ್ಯ ಆಡುತ್ತಾನೆ, ನಟಿಸುತ್ತಾನೆ.

**ಸ್ನೇಹಿತ ೭** : ಕಥೆ ಎಷ್ಟು ಚೆನ್ನಾಗಿ ಹೇಳ್ತಾನೇ ಅಂತೀಯಾ?

**ಸ್ನೇಹಿತ ೮** : ಏ, ಗದಾಯ್ ನೀನು ಎಲ್ಲಾದರಲ್ಲಿಯೂ ಜಾಣ ಕಣೋ.

**ಸ್ನೇಹಿತ ೯** : ಆದರೆ, ಗಣಿತ ಒಂದರಲ್ಲಿ ಬಿಟ್ಟು.

**ಸ್ನೇಹಿತ ೧೦** : ಅದ್ಯಾಕೋ, ಎಲ್ಲಾ ಅಷ್ಟು ಬೇಗ ಅಷ್ಟು ಚೆನ್ನಾಗಿ ಕಲೀತೀಯಾ! ಗಣಿತ ಯಾಕೆ ಬರಲ್ಲ ನಿನಗೆ?

**ಗದಾಯ್**: ನನಗೆ ಆ ಲೆಕ್ಕಚಾರ ಹಾಕೋದು ಅಂದರೆ ಆಗೋಲ್ಲ.

**ಸ್ನೇಹಿತ ೧೨** : ಈವಾಗ ಇನ್ನೂ ಉಪಾಧ್ಯಾಯರು ಬಂದಿಲ್ಲ. ಎಲ್ಲರೂ ಲಂಕಾದಹನ ನಾಟಕ ಅಭಿನಯಿಸೋಣ.

**ಗದಾಯ್** : ಬನ್ನಿ ಎಲ್ಲಾ ಆ ಮಾವಿನ ತೋಪಿಗೆ ಹೋಗೋಣ. ಅಲ್ಲಿ ನಿಮಗೆಲ್ಲಾ ಪಾತ್ರ ಹೇಳಿಕೊಡುತ್ತೇನೆ. ಎಲ್ಲರೂ ಸೇರಿ ನಾಟಕ ಆಡೋಣ.

**ಸ್ನೇಹಿತ ೧೨** : ಹೋ! ಎಷ್ಟು ಚೆನ್ನಾಗಿರುತ್ತೆ! [*ಎಲ್ಲರೂ ಓಡುತ್ತಾರೆ.*]

### ದೃಶ್ಯ ೬

[*ಹಿನ್ನೆಲೆಯಲ್ಲಿ : ಗದಾಯ್‌ಗೆ ೭ ವರ್ಷ ವಯಸ್ಸಾದಾಗ ಅವರ ತಂದೆ ತೀರಿಕೊಂಡರು. ಇದು ಬದುಕಿನಲ್ಲಿ ತೀವ್ರ ವೈರಾಗ್ಯ, ನೋವು, ತಾಯಿಯ ಪರಿಸ್ಥಿತಿಗೆ ದುಃಖ ಎಲ್ಲ ಉಂಟು ಮಾಡಿತು. ಆದರೆ ಆ ವಯಸ್ಸಿಗೆ ಗದಾಯ್‌ಗೆ ತಿಳಿವಳಿಕೆ ಎಷ್ಟಿದ್ದಿತೆಂದರೆ ತಾಯಿಯ ದುಃಖ ನೋವನ್ನು ಆದಷ್ಟು ಮರೆಯುವಂತೆ ಮಾಡಲು ಅವನು ಸದಾ ಅವರ ಜೊತೆಯಲ್ಲೇ ಇದ್ದು ಅವರಿಗೆ ಮನೆಕೆಲಸದಲ್ಲಿ ನೆರವಾಗುತ್ತಿದ್ದ. ತನ್ನ ಕೋಮಲ ಸುಕುಮಾರ ಕಂಠದಿಂದ ಭಕ್ತಿಗೀತೆಗಳನ್ನು ಹಾಡುತ್ತಾ ತನ್ನ ನಡವಳಿಕೆಯಿಂದ ಅವರ ಮನ ರಂಜಿಸುತ್ತಿದ್ದ. ಕಾಮಾರಪುಕೂರ ಕಲ್ಕತ್ತೆಯಿಂದ ಪೂರಿಜಗನ್ನಾಥ್‌ಗೆ ಹೋಗುವ ದಾರಿಯಲ್ಲಿದೆ. ಅನೇಕ ಭಕ್ತರು ಸಾಧುಸಂತರು ಆ ಮಾರ್ಗದ ಮೂಲಕ ಜಗನ್ನಾಥ್‌ಗೆ ಹೋಗುವಾಗ ಕಾಮಾರಪುಕೂರದಲ್ಲಿ ಯಾತ್ರಿಕರಿಗೆಂದು ಕಟ್ಟಿಸಿದ್ದ ಛತ್ರದಲ್ಲಿ ಸ್ವಲ್ಪ ಕಾಲ ತಂಗಿ ಹೋಗುತ್ತಿದ್ದರು. ಅನೇಕ ಸಂನ್ಯಾಸಿಗಳು ಈ ರೀತಿ ಬಂದು ಆ ಛತ್ರದಲ್ಲಿ ತಂಗುತ್ತಿದ್ದರು. ಗದಾಯ್‌ಗೆ ಮೊದಲಿನಿಂದಲೂ ಸಂನ್ಯಾಸಿಗಳ ಸಹವಾಸ, ಅವರ ಸಂಭಾಷಣೆ, ಅವರು ಜಪ ಧ್ಯಾನ ಮಾಡುವುದು ಇದೆಲ್ಲ ಬಹಳ ಇಷ್ಟ. ಆದ್ದರಿಂದ ಯಾರಾದರೂ ಸಂನ್ಯಾಸಿಗಳು ಅಲ್ಲಿ ತಂಗಿದ್ದಾರೆ ಎಂದರೆ ಗದಾಯ್ ಅಲ್ಲಿ ಹೋಗುತ್ತಿದ್ದ. ಒಂದು ದಿನ ಈ ರೀತಿ ಸಾಧುಗಳ ಗುಂಪಿಗೆ ಬಂದಿದ್ದಾನೆ ಗದಾಯ್.*]

**ಸಂನ್ಯಾಸಿ**: ಬಾ ಗದಾಯ್, ಏನು ಸಮಾಚಾರ?

**ಗದಾಯ್** : ನೀವು ಹಾಡುತ್ತಿದ್ದರಲ್ಲಾ ಆ ಹಾಡು ತುಂಬ ಚೆನ್ನಾಗಿದೆ. ನನಗೂ ಹೇಳಿಕೊಡುತ್ತೀರಾ?

**ಸಂನ್ಯಾಸಿ**: ಯಾವುದು ಆ ಹಾಡು?

**ಗದಾಯ್** : ಸಕಲೀ ತೋಮಾರ್ ಇಚ್ಛಾ

**ಸಂನ್ಯಾಸಿ**: ಓ ಅದಾ ಆಗಲಿ. ಬಾ... ಸಕಲೀ ತೋಮಾರ್ ಇಚ್ಛಾ... (*ಎರಡು ಬಾರಿ ಹಾಡುವರು*).

**ಸಾಧು**: ಈಗ ಹಾಡಿದ್ದು ಸಾಕು. ಊಟಕ್ಕೆ ಹೊತ್ತಾಯಿತು. ಬನ್ನಿ ಊಟ ಮಾಡೋಣ.

**ಸಂನ್ಯಾಸಿ**: ಬಾ ಗದಾಯ್, ನಮ್ಮೊಂದಿಗೆ ಇಂದು ನೀನು ಉಣ್ಣು.

**ಗದಾಯ್** : ಸರಿ ನಡೆಯಿರಿ.

**ಸಂನ್ಯಾಸಿ**: ನೀನು ಬಹಳ ಒಳ್ಳೆ ಹುಡುಗನಪ್ಪ. ನಮಗಂತೂ ನಿನ್ನನ್ನು ಕಂಡರೆ ಬಹಳ ಇಷ್ಟ.

ಗದಾಯ್ : ಏಕೆ?

ಸಂನ್ಯಾಸಿ: ಇಷ್ಟು ಚಿಕ್ಕ ವಯಸ್ಸಿಗೇ ಎಷ್ಟು ತಿಳಿವಳಿಕೆ ಇದೆ ನಿನಗೆ! ನಮಗೆ ಎಷ್ಟು ಸಹಾಯ ಮಾಡಿಕೊಡುತ್ತೀಯೆ. ನೀರು ತಂದುಕೊಡುತ್ತೀಯೆ, ಸೌದೆ ಆರಿಸಿ ತಂದು ಕೊಡುತ್ತೀಯೆ.

ಗದಾಯ್ : ಅದೆಲ್ಲಾ ಏನು ಮಹಾ! ನೀವು ನನಗೆ ಪ್ರೀತಿಯಿಂದ ಹಾಡು ಕಲಿಸುತ್ತೀರಿ, ದೇವರ ಕಥೆ ಹೇಳುತ್ತೀರಿ. ತಿಂಡಿ, ಊಟ ಎಲ್ಲ ನಿಮ್ಮ ಜೊತೆಗೆ ನನಗೂ ಆಗುತ್ತೆ. ಇಂತಹ ಸಾಧು ಸಂತರ ಸಹವಾಸ ಸಿಗುವುದು ಒಂದು ಸುಯೋಗವಲ್ಲವೇ?

ಸಂನ್ಯಾಸಿ: ಭೇಷ್, ಇಷ್ಟು ಚಿಕ್ಕ ವಯಸ್ಸಿಗೇ ಎಷ್ಟು ತಿಳಿದು ಕೊಂಡಿದ್ದೀಯೆ? ಗದಾಯ್, ನಿನಗೆ ಸಾಧುಗಳು ಅಂದರೆ ಅಷ್ಟು ಇಷ್ಟ ಅಂತ ಹೇಳಿದ್ದೀಯೆ. ನಿನಗೆ ಸಾಧು ವೇಷ ಹಾಕೋಣವಾ?

ಗದಾಯ್: ಓ ಹಾಕಿ, ನನಗಿಷ್ಟ. [*ಸಾಧು ವೇಷ ಹಾಕುವರು*]

ಸಂನ್ಯಾಸಿ: ಆಹಾ! ಗದಾಯ್ ನೀನು ಈ ಸಂನ್ಯಾಸಿ ವೇಷದಲ್ಲಿ ಥೇಟ್ ಮಹಾದೇವನಂತೆಯೇ ಕಾಣುತ್ತಿದ್ದೀಯೆ. ನಿನಗೆ ಈ ವೇಷ ಬಹಳ ಚೆನ್ನಾಗಿ ಒಪ್ಪುತ್ತದೆ.

ಗದಾಯ್: ನಾನು ಮನೆಗೆ ಹೋಗಿ ನಮ್ಮ ಮನೆಯವರಿಗೂ ಈ ವೇಷ ತೋರಿಸಿ ಬರಲೇ?

ಸಂನ್ಯಾಸಿ: ಓ ಹಾಗೇ ಮಾಡು.

### ದೃಶ್ಯ ೭

ಗದಾಯ್ : ಅಮ್ಮಾ, ಅಮ್ಮಾ,

ಚಂದ್ರಮಣಿ : ಏನು ಮಗು. ಅಯ್ಯೋ, ಇದೇನು ನಿನ್ನ ವೇಷ. ಇದೆಲ್ಲಿ ಸಿಕ್ಕಿತೋ ನಿನಗೆ?

ಗದಾಯ್ : ಅಮ್ಮ, ಲಾಹಾರವರ ಧರ್ಮಛತ್ರಕ್ಕೆ ಬಂದಿದ್ದರಲ್ಲ ಆ ಸಾಧುಗಳು, ಅವರು ನನಗೆ ಊಟ ಹಾಕಿದರಮ್ಮ, ಮತ್ತು ಈ ಸಾಧು ವೇಷ ನಿನಗೆ ಹೇಗಿರತ್ತೆ ನೋಡೋಣ ಎಂದು ಹೇಳಿ ಈ ವೇಷ ಹಾಕಿದರಮ್ಮ. ಅಮ್ಮ, ಹೇಗಿದೆ ಈ ವೇಷ, ನನಗೆ ಹೇಳಮ್ಮ.

ಚಂದ್ರಮಣಿ : ಅಯ್ಯೋ, ಕಂದ, ನಾನು ಏನೆಂದು ಹೇಳಲಿ. ನನಗೆ ಭಯವಾಗುತ್ತಿದೆ. ನನ್ನ ಹೃದಯ ಡಬಡಬ ಹೊಡೆದು ಕೊಳ್ಳುತ್ತಿದೆ.

ಗದಾಯ್ : ಏಕಮ್ಮ, ಈ ಗಾಬರಿ?

ಚಂದ್ರಮಣಿ : ಅಲ್ಲ ಮಗು, ಆ ಸಾಧುಗಳು ಈ ರೀತಿ ನಿನ್ನನ್ನು ಪುಸಲಾಯಿಸಿ ಎಲ್ಲಿಯಾದರೂ ತಮ್ಮೊಂದಿಗೆ ನಿನ್ನನ್ನು ಲಪಟಾಯಿಸಿಕೊಂಡು ಹೊರಟುಹೋದರೇನು ಮಾಡಲಿ? ಮಗು ನೀನಿಲ್ಲದೆ ನಾನಿರಲಾರೆ [*ಅಳುವಳು*]

ಗದಾಯ್ : ಅಮ್ಮ, ಅಳಬೇಡಮ್ಮ. ಅವರು ಅಂತಹ ಕೆಟ್ಟ ಸಾಧುಗಳಲ್ಲಮ್ಮ. ಬಹಳ ಒಳ್ಳೆಯವರು. ನನ್ನನ್ನೇನೂ ಆ ರೀತಿ ಹಾರಿಸಿಕೊಂಡು ಹೋಗುವುದಿಲ್ಲಮ್ಮ.

ಚಂದ್ರಮಣಿ : ಏನೇ ಆಗಲಿ ಮಗು, ಇನ್ನು ನೀನು ಅವರಿರುವಲ್ಲಿಗೆ ಹೋಗಬೇಡ. ನಿನಗೆ ಅವರ ಸಹವಾಸವೇ ಬೇಡ.

ಗದಾಯ್ : ಸರಿಯಮ್ಮ, ನೀನು ಹೇಳಿದಂತೆಯೇ ಕೇಳುತ್ತೇನೆ. ಆದರೆ ಅವರಿಗೆ ಹೇಳದೆ ಹಾಗೆಯೇ ನಿಂತುಬಿಟ್ಟರೆ ಅವರು ಏನೆಂದು ಕೊಳ್ಳುತ್ತಾರಮ್ಮ. ಕಡೆಯ ಸಲ ಅವರಿಗೆ, ನಾನು ಇನ್ನು ಇಲ್ಲಿ ಬರುವುದಿಲ್ಲ ಎಂದು ಹೇಳಿ, ಅವರ ಈ ಉಡುಪನ್ನು ಹಿಂದಿರುಗಿಸಿ ಬಂದುಬಿಡುತ್ತೇನೆ.

ಚಂದ್ರಮಣಿ : ಸರಿ, ಆದರೆ ಜೋಪಾನ. ಬೇಗ ಬಂದುಬಿಡು. ನೀನು ಬರುವವರೆಗೂ ನನಗೆ ಮನಸ್ಸಮಾಧಾನವಿರುವುದಿಲ್ಲ.

ಗದಾಯ್: ಸರಿಯಮ್ಮ ಬೇಗ ಬರುತ್ತೇನೆ.

### ದೃಶ್ಯ ೮

ಗದಾಯ್ : ಸ್ವಾಮಿ, ಸ್ವಾಮಿ!

ಸಂನ್ಯಾಸಿ : ಏನು ಗದಾಯ್?

ಗದಾಯ್ : ಮೊದಲು ನನ್ನ ಈ ವೇಷವನ್ನು ಬಿಚ್ಚಿ. ನಾನು ಬೇಗ ಮನೆಗೆ ಹಿಂದಿರುಗಬೇಕು.

ಸಂನ್ಯಾಸಿ : ಏಕೆ ಗದಾಯ್ ಇಷ್ಟು ಅವಸರ?

ಗದಾಯ್ : ನನ್ನ ಅಮ್ಮ ಈ ವೇಷ ನೋಡಿ ಹೆದರಿದ್ದಾರೆ, ಎಲ್ಲಿ ನೀವು ನನ್ನನ್ನು ನಿಮ್ಮೊಂದಿಗೆ ಕರೆದೊಯ್ದುಬಿಡುತ್ತೀರೋ ಎಂದು. ಅದಕ್ಕೆ ನನ್ನಿಂದ ಇನ್ನುಮೇಲೆ ಇಲ್ಲಿಗೆ ಬರುವುದಿಲ್ಲ ಎಂದು ಮಾತು ತೆಗೆದುಕೊಂಡಿದ್ದಾರೆ. ನಿಮಗೆ ಕಡೆಯ ಸರ್ತಿ ಹೇಳಿ ಹೋಗೋಣವೆಂದು ಬಂದೆ.

ಸಂನ್ಯಾಸಿ : ಓ, ಹೀಗೋ ಸಮಾಚಾರ, ನೀನೇನು ಭಯ ಪಡಬೇಡ. ನಾವು ಅಂತಹ ಸಂನ್ಯಾಸಿಗಳಲ್ಲ.

ಗದಾಯ್ : ಅದು ನನಗೆ ಗೊತ್ತು. ಆದರೆ ನಮ್ಮ ಅಮ್ಮ ಸುಮ್ಮನೆ ಭಯ ಪಡುತ್ತಾರಲ್ಲ. ಏನು ಮಾಡಲಿ?

ಸಂನ್ಯಾಸಿ : ನಡಿ, ನಾವು ನಿನ್ನೊಂದಿಗೆ ಬಂದು ನಿನ್ನ ತಾಯಿಗೆ ಸಮಾಧಾನ ಹೇಳುತ್ತೇವೆ.

ಗದಾಯ್ : ಬನ್ನಿ ಹಾಗಾದರೆ ಹೋಗೋಣ.

### ದೃಶ್ಯ ೯

ಗದಾಯ್ : ಅಮ್ಮ, ಇಲ್ಲಿ ನೋಡು ಯಾರು ಬಂದಿದ್ದಾರೆ ಅಂತ.

ಚಂದ್ರಮಣಿ : ಓಹೋ, ಆ ಸಾಧುಗಳೇ ಬಂದುಬಿಟ್ಟದ್ದಾರೆ. ಬನ್ನಿ ಒಳಗೆ.

ಸಂನ್ಯಾಸಿ : ಅಮ್ಮ, ನೀವು ನಿಮ್ಮ ಮಗನನ್ನು ನಾವೆಲ್ಲಿ ಅಪಹರಿಸಿ ಕರೆದುಕೊಂಡು ಹೋಗುತ್ತೇವೋ ಎಂದು ಹೆದರಿದ್ದರಂತಲ್ಲ. ಅದಕ್ಕೇ ನಾವು ಆ ರೀತಿ ಮಾಡುವವರಲ್ಲ, ಸುಮ್ಮನೆ ತಮಾಷೆಗಾಗಿ ಅವನಿಗೆ ಆ ಉಡುಪು ಹಾಕಿದ್ದೆವು ಅಷ್ಟೇ ಎಂದು ನಿಮಗೆ ಹೇಳಲು ಬಂದೆವು.

ಚಂದ್ರಮಣಿ : ಏನಪ್ಪ ಮಾಡಲಿ? ನನ್ನ ತಾಯಿ ಹೃದಯ ಅವನು ಸಂನ್ಯಾಸಿಯಂತೆ ಕಾಣುವುದನ್ನು ನೋಡಿ ಸಹಿಸಲಾಗದು. ಆದ್ದರಿಂದ ಆ ರೀತಿ ನುಡಿದೆ. ಇದರಿಂದ ನಿಮಗೆ ಬೇಸರವಾಗಿದ್ದರೆ ಕ್ಷಮಿಸಿ.

ಸಂನ್ಯಾಸಿ : ಇಲ್ಲಮ್ಮ, ಇದು ಸಹಜ. ಪ್ರಪಂಚದ ರೀತಿಯೇ

ಹೀಗಿದೆ. ಯಾವ ತಾಯಿಯೂ ಮಗ ಸಂನ್ಯಾಸಿಯಾಗುವುದನ್ನು ಸಹಿಸುವುದಿಲ್ಲ. ಇಗೋ ನಿಮ್ಮ ಮಗನನ್ನು ನಿಮಗೇ ಒಪ್ಪಿಸಿದ್ದೇವೆ. ಇನ್ನು ಹೊರಡುತ್ತೇವೆ.

**ಚಂದ್ರಮಣಿ** : ಇರಿ ಅಪ್ಪ, ಸಾಧುಗಳು ಮನೆಗೆ ಬಂದು ಹಾಗೆಯೇ ಹಿಂದಿರುಗಬಾರದು. ಅದು ಮನೆಗೆ ಅಶುಭ. ಆದ್ದರಿಂದ ಬನ್ನಿ ಒಳಗೆ ಸ್ವಲ್ಪ. ಏನಾದರೂ ಉಪಾಹಾರ ಮಾಡಿಕೊಂಡು ಹೋಗಿ.

**ಸಂನ್ಯಾಸಿ** : ಸರಿಯಮ್ಮ, ನಡೆಯಿರಿ.

ದೃಶ್ಯ ೧೦

*[ವಿಶಾಲಾಕ್ಷಿಯ ದರ್ಶನಕ್ಕೆ]*

**ಹೆಂಗಸು** : ಚಂದ್ರ, ಇಂದು ನಾವೆಲ್ಲಾ ಆಣೂರು ಗ್ರಾಮದ ವಿಶಾಲಾಕ್ಷಿ ದೇವಸ್ಥಾನಕ್ಕೆ ಹೋಗುತ್ತಿದ್ದೇವೆ. ನೀನು ಬರುವೆಯಾ?

**ಚಂದ್ರಮಣಿ** : ಇಲ್ಲಮ್ಮ, ನನಗಿನ್ನೂ ಕೆಲಸವಿದೆ. ನಾನು ಬರುವುದಕ್ಕಾಗುವುದಿಲ್ಲ.

**ಗದಾಯ್** : ಅಮ್ಮ, ನಾನು ಇವರ ಜೊತೆಯಲ್ಲಿ ಹೋಗುತ್ತೇನೆ.

**ಚಂದ್ರಮಣಿ** : ಅದು ಬಹಳ ದೂರ ಇದೆ ಮಗು. ನಿನ್ನಿಂದ ಅಷ್ಟು ದೂರ ನಡೆಯಲು ಸಾಧ್ಯವಿಲ್ಲ.

**ಗದಾಯ್** : ಎಷ್ಟು ದೂರ ಇದೆಯಮ್ಮ?

**ಹೆಂಗಸು** : ಗದಾಯ್, ದೇವಸ್ಥಾನ ಇಲ್ಲಿಂದ ೩ ಮೈಲಿ ದೂರ ಇದೆ.

**ಗದಾಯ್** : ಅಷ್ಟೇ ತಾನೆ. ಅಮ್ಮ, ನನಗೂ ಹೋಗಲು ಅನುಮತಿ ಕೊಡಮ್ಮ. ನನಗೂ ದೇವಿಯನ್ನು ನೋಡಲು ಆಸೆ.

**ಹೆಂಗಸು** : ಬರಲಿ ಬಿಡು, ಚಂದ್ರ. ಗದಾಯ್ ಬಂದರೆ ದಾರಿ ಉದ್ದಕ್ಕೂ ಅವನು ಹಾಡುತ್ತಾ ಬರುತ್ತಾನೆ. ನಮಗೆ ದಾರಿ ಸವೆಸಿದ್ದೇ ತಿಳಿಯುವುದಿಲ್ಲ.

**ಚಂದ್ರಮಣಿ** : ಆದರೆ ಇಷ್ಟು ಬಿಸಿಲಿದೆಯಲ್ಲಾ?

**ಗದಾಯ್** : ಅಮ್ಮ ಏನೂ ಪರವಾಗಿಲ್ಲ. ನನಗೆ ಬಿಸಿಲಿನಲ್ಲಿ ಆಡಿ ಅಭ್ಯಾಸವಿದೆ.

**ಚಂದ್ರಮಣಿ** : ಸರಿ ಹೋಗಿಬಿಟ್ಟು, ಬಾ. ಅವರಿಗೇನೂ ತೊಂದರೆ ಕೊಡಬೇಡ.

**ಗದಾಯ್** : ಆಯಿತಮ್ಮಾ.

*[ಹೆಂಗಸರೆಲ್ಲಾ ಗದಾಯ್ ಸಹಿತ ಹೊರಡುವರು.]*

ದೃಶ್ಯ ೧೧

**ಹೆಂಗಸು ೧** : ಗದಾಯ್, ಹಾಡು ಹೇಳೋ.

**ಹೆಂಗಸು ೨** : ಹೌದು, ಹೌದು, ನಿನ್ನ ಹಾಡು ಕೇಳ್ತಾ ಇದ್ದರೆ ನಮಗೆ ನಡೆದ ಶ್ರಮವೇ ಕಾಣಿಸುವುದಿಲ್ಲ.

**ಗದಾಯ್** : ಯಾವುದು ಹೇಳಲಿ?

**ಹೆಂಗಸು ೧** : "ತಾಯಿ ದುರ್ಗೆಯ" ಹೇಳೋ

*[ಹಾಡು ಹೇಳುತ್ತಾ ನಡೆಯುತ್ತಿರುವರು. ಗದಾಯ್ ಇದ್ದಕ್ಕಿದ್ದಂತೆ ಹಾಡು ನಿಲ್ಲಿಸಿ ಬಿದ್ದುಬಿಡುವನು.]*

**ಹೆಂಗಸು ೧** : ಏ ಪ್ರಸನ್ನಮಯೀ, ಗದಾಯ್ ಬಿದ್ದುಹೋದ ನೋಡು.

**ಹೆಂಗಸು ೨** : ಅಯ್ಯೋ, ಅವನಿಗೇನಾಯಿತು?

**ಹೆಂಗಸು ೩** : ಬಿಸಿಲು ತಡೆಯಲಿಲ್ಲವೋ ಏನೋ?

**ಹೆಂಗಸು ೪** : ಎಲ್ಲಿ, ನೀರು ತಟ್ಟಿ.

**ಹೆಂಗಸು ೫** : ಗಾಳಿ ಹಾಕಿ.

**ಹೆಂಗಸು ೬** : ಇದೇನು, ಏನು ಮಾಡಿದರೂ ಏಳುತ್ತಿಲ್ಲ.

**ಪ್ರಸನ್ನಮಯೀ** : ಇರಿ, ಇರಿ, ಅವನಿಗೆ ದೇವಿ ಮೇಲೆ ಬಹಳ ಭಕ್ತಿ. ಆದ್ದರಿಂದ ಹೀಗಾಗಿರಬೇಕು. ನಾನು ಅವನ ಕಿವಿಯಲ್ಲಿ ದೇವಿ ಹೆಸರನ್ನು ಹೇಳುತ್ತೇನೆ. ವಿಶಾಲಾಕ್ಷೀ, ವಿಶಾಲಾಕ್ಷೀ, ಅಮ್ಮ, ವಿಶಾಲಾಕ್ಷೀ.

*[ಗದಾಯ್ ಎದ್ದು ಕಣ್ಣು ತೆರೆಯುವನು.]*

**ಹೆಂಗಸು** : ಸದ್ಯ, ಗದಾಯ್ ಎದ್ದ. ಏನಾಯಿತು ಗದಾಯ್ ನಿನಗೆ?

**ಗದಾಯ್** : ನನಗೆ ದೇವಿಹಾಡು ಹಾಡುತ್ತಾ ಹಾಡುತ್ತಾ ಅವಳದೇ ಸ್ವರೂಪ ಕಣ್ಣ ಮುಂದೆ ಬಂದಂತಾಗಿ ನನಗೇ ಗೊತ್ತಿಲ್ಲದೆ ಬಿದ್ದುಬಿಟ್ಟೆ.

**ಪ್ರಸನ್ನಮಯೀ** : ಈಗ ಮನೆಗೆ ಹೋಗೋಣ. ನಿನಗೆ ನಡೆಯುವುದಕ್ಕಾಗುತ್ತದೋ ಇಲ್ಲವೋ.

**ಗದಾಯ್** : ಏನಿಲ್ಲ, ನಾನು ಹುಷಾರಾಗಿಯೇ ಇದ್ದೇನೆ. ಬನ್ನಿ ದೇವಿ ದರ್ಶನಕ್ಕೆಂದು ಬಂದವರು ಹಾಗೆಯೇ ಹಿಂದಿರುಗಬಾರದು.

**ಹೆಂಗಸು** : ಸರಿ, ನಡೆಯಿರಿ.

(ಮುಂದುವರಿಯುತ್ತದೆ.)

**ಎಲ್ಲ ಬಂಧನಗಳಿಂದ ಮುಕ್ತನಾಗಿ ಒಬ್ಬನು ಧ್ಯಾನ ಮಾಡಬೇಕು. ಹುಟ್ಟುವಾಗಲೇ ಮಾನವನು ದ್ವೇಷ, ಗೌರವ, ನಾಚಿಕೆ, ಅಂಜಿಕೆ, ವಂಶದ ಹೆಮ್ಮೆ, ಅಹಂಕಾರ, ಸಾಮಾಜಿಕ ಪದ್ಧತಿ ಇವುಗಳಿಂದ ಬಂಧಿತನಾಗುವನು. ಜನಿವಾರವೂ ಕೂಡ ಒಂದು ಬಂಧನ. ಇದು ಅಹಂಕಾರದ ಒಂದು ಚಿಹ್ನೆ, ತಾನು ಬ್ರಾಹ್ಮಣನೆಂದೂ ಎಲ್ಲರಿಗಿಂತ ಉತ್ತಮನೆಂದೂ ತಿಳಿಯುವಂತೆ ಮಾಡುತ್ತದೆ. ಆದಕಾರಣ ಜಗಜ್ಜನನಿಯನ್ನು ಧ್ಯಾನಿಸುವಾಗ ಈ ಬಂಧನಗಳನ್ನೆಲ್ಲ ತೊಡೆದುಹಾಕಿ ಸ್ವತಂತ್ರನಾಗಬೇಕು.**

**— ಶ್ರೀರಾಮಕೃಷ್ಣ**